# ಪರಿಸರ ಸ್ನೇಹಿ ಬ್ಯಾಂಗೋ



ಬಿದಿರು ಅತ್ಯಂತ ವೇಗವಾಗಿ ಬೆಳೆಯುವ ಸಸ್ಯ. ಅತ್ಯಂತ ಗಟ್ಟಿ ಹಾಗೂ ಹಗುರ ಗುಣವನ್ನೂ ಹೊಂದಿರುವ ಇದನ್ನು ಪರಿಸರ ಸ್ನೇಹಿ ವಸ್ತು ಎಂದೇ ಪರಿಗಣಿಸುತ್ತೇವೆ. ಜಪಾನ್‌ನ ಕೈಟೊ ಯೂನಿವರ್ಸಿಟಿಯ ಸಂಶೋಧಕರು ಬಿದಿರನ್ನೇ ಬಳಸಿ ಹೊಸ ಕಾರನ್ನು ರೂಪಿಸಿದ್ದಾರೆ. ಬ್ಯಾಂಗೋ ಎಂದು ಕರೆಯಲ್ಪಡುವ ಈ ಪರಿಸರ ಸ್ನೇಹಿ ಪುಟ್ಟ ಕಾರು 270 ಸೆಂ.ಮೀ ಉದ್ದವಾಗಿದ್ದು, 130 ಸೆಂ.ಮೀ ಅಗಲ ಹಾಗೂ 165 ಸೆಂ.ಮೀ ಎತ್ತರ ಇದೆ.

ಒಬ್ಬರೇ ಕುಳಿತು ಪಯಣಿಸಬಹುದಾದ ಈ ಕಾರು 60 ಕೆ.ಜಿ ತೂಕವುಳ್ಳದ್ದು. ಅಪ್ಪಟ ಪರಿಸರ ಪ್ರೇಮಿಗಳಿಗಾಗಿ ರೂಪಿತವಾದ ಈ ಚಿಕ್ಕ ಕಾರನ್ನು ಒಮ್ಮೆ ಚಾರ್ಜ್ ಮಾಡಿದರೆ 30 ಕಿ.ಮೀ ದೂರ ಓಡಿಸಬಹುದು.

■ ವಿದ್ಯಾ ಹಾಲಭಾವಿ

